ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಮನೆಯಲ್ಲಿ ಹಿರಿಯರಿದ್ದರೆ ದೀಪ ಇದ್ದಂತೆ. ಪಕ್ಕದಲ್ಲಿ ಹಿರಿಯರಿದ್ದರೆ?



ವಯಸ್ಸಾದವರಲ್ಲವೆ, ಬುಡ್ಡಿ ದೀಪ ಅಥವಾ ಬುಡ್ಡಾ ದೀಪ.

ದಿನೇಶ್, ಗುಡ್ಡದೂರು

ಸ್ವರ್ಗ ಮತ್ತು ನರಕ ಎಂಬ ಜಾಗಗಳು ಈಗಲೂ ಇವೆಯಾ?

ಗೌರವ ದೊರಕುವ ಸ್ಥಳವೇ ಸ್ವರ್ಗ. ಅವಮಾನ ಆಗುವ ಸ್ಥಳವೇ ನರಕ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ನನ್ನದೇನೂ ತಪ್ಪಿಲ್ಲ ಎನ್ನುತ್ತಿದ್ದವರು ಈಗ ನನಗೇನೂ ಗೊತ್ತಿಲ್ಲ ಎನ್ನುತ್ತಿರುವರಲ್ಲ?

ವಕೀಲರೊಡನೆ ಚರ್ಚಿಸಿದ ನಂತರ ಖಳಮಾರ್ಗದಲ್ಲಿ ತಮಗೇನೂ ಗೊತ್ತಿಲ್ಲ ಎಂದು ಅರಿತರಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಕತ್ತಲೆಗೆ ಬೆಳಕಿನ ಭಯ ಉಂಟೇ ಸರ್?



ಇಲ್ಲ. ಅವೆರಡೂ ಶಿಫ್ಟ್ ವರ್ಕ್. ಅದು ಲಾಗಿನ್ ಆದಾಗ ಇದು ಲಾಗೌಟ್.

ಬಿ.ಆರ್. ಉಷಾ, ಕೆನಡಾ

ಕೆನಡಾದಲ್ಲಿ ಕನ್ನಡ ಮಾತಾಡ್ತಾರೆ. ನಮ್ಮಲ್ಲಿ ಕನ್ನಡದವರೇ ಇಂಗ್ಲಿಷ್ ಮಾತಾಡ್ತಿರ್ತಾರಲ್ಲಾ?

ಆಂಗ್ಲನೆಲದಲ್ಲಿ ಕನ್ನಡವಾದರೆ ಕನ್ನಡ ನೆಲದಲ್ಲಿ ಆಂಗ್ಲ ಸರಿ ಎಂಬುದು ಅವರ ವಾದ.

ಬೂಕನಕೆರೆ ವಿಜೇಂದ್ರ, ಮೈಸೂರು

ಶ್ರೀಮಂತರೇಕೆ ಹೆಚ್ಚು ಮಾತನಾಡುವುದಿಲ್ಲ?

ಮಾತಿನಿಂದ ಸ್ನೇಹ, ಸ್ನೇಹದಿಂದ ನೆರವಿನ ಅರ್ಜಿ ಬರುವುದೆಂದು.

ಪಿ.ಜೆ. ರಾಘವೇಂದ್ರ, ಮೈಸೂರು

ಹಸಿಸುಳ್ಳು ಇರುವಂತೆ ಒಣಸುಳ್ಳು ಏಕಿಲ್ಲ?

ಸುಳ್ಳು ಒಣಗಿದರೆ ನಿಜ ಕಂಡುಬಿಡುವುದಂತೆ.

ಬಿ. ಬಸವರಾಜ್, ಹರಿಹರ

ಆಸೆಯೇ ದುಃಖಕ್ಕೆ ಮೂಲವಂತೆ. ಆಸೆಗೆ ಮೂಲ?

‘ಇತರರು ನಮಗಿಂತ ಚೆನ್ನಾಗಿದ್ದಾರಲ್ಲ’ ಎಂಬ ದುಃಖ.

ಅಮರಯ್ಯಾ ಪತ್ರಿಮಠ, ಸುರಪುರ

ಬದುಕು ಅರ್ಥಪೂರ್ಣ ಆಗುವುದು ಯಾವಾಗ?

ಬದುಕಿನ ಅರ್ಥವಾಗದ ‘ಪದ’ಗಳಿಗೆ ನಾವೇ ಡಿಕ್ಷನರಿ ಆದಾಗ.

ಫಾಲನೇತ್ರ ಸಜ್ಜನ, ಶಿರಸಿ

ಧರ್ಮದ ಉನ್ನತಿ, ಅವನತಿಯನ್ನು ಯಾವುದರಿಂದ ಅಳೆಯುತ್ತಾರೆ?

ಆಚಾರದ ಅತಿ, ಮಿತಿಗಳಿಂದ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಕೆಲವರು ದೊಡ್ಡವರು ಎನಿಸಿಕೊಂಡಿದ್ದರೂ ತಮ್ಮ ಚಿಲ್ಲರೆ ಬುದ್ಧಿಯನ್ನು ಬಿಡುತ್ತಿಲ್ಲವಲ್ಲಾ?

ತಪ್ಪು ಅವರದಲ್ಲ, ಅವರನ್ನು ದೊಡ್ಡವರು ಎಂದು ಕರೆದ ಸ್ವಾರ್ಥಿಯದು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಇಲ್ಲೊಬ್ಬ ಸ್ವಾಮೀಜಿ ಕೊಟ್ಟ ದಾನವನ್ನು ವಾಪಸ್ ಕೇಳುತ್ತಿದ್ದಾರೆ. ಇದು ಸರಿಯೆ?

ದಾನವು ಸೆಕ್ಷನ್ 80ಸಿ ಪ್ರಕಾರ ತೆರಿಗೆ ವಿನಾಯಿತಿ ಪಡೆಯದೆಂದು ತಿಳಿಯಿತಂತಲ್ಲ.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು

ಕೆಲವರು ಹಳೆಯ ನೋಟುಗಳನ್ನು ಬಹಳ ಪ್ರೀತಿಯಿಂದ ಇಟ್ಟಿರುತ್ತಾರೆ. ಏಕೆ?

ಅವು ಅವರು ಚಲಾವಣೆಯಲ್ಲಿದ್ದ ದಿನಗಳನ್ನು ನೆನಪಿಸುತ್ತವಂತೆ.

ಮಲ್ಲಿಕಾರ್ಜುನ, ಸುರಧೇನುಪುರ

ಕೀರ್ತಿಶಿಖರದ ವಿಳಾಸ ನೀಡುವಿರಾ?

ನಂ 1, ಶ್ರಮ ರಸ್ತೆ, ಅವಕಾಶ ಬಡಾವಣೆ, ವಶೀಲಿಪುರ.

## ಬಹುಮಾನಿತ ಪ್ರಶ್ನೆ

ವಾಸಣ್ಣ, ಧಾರವಾಡ

ಅಂದು ರಾಮಾಯಣ ಅಯೋಧ್ಯೆಯಲ್ಲಿ, ಭಾರತ ಹಸ್ತಿನಾಪುರದಲ್ಲಿ. ಇಂದು ಅವೆರಡೂ ಎಲ್ಲೆಡೆ ನಡೆಯುತ್ತಿವೆಯಲ್ಲ?

ಅದಕ್ಕೆ ರಾವಣರು, ಶಕುನಿಗಳ ವಂಶವು ಎಗ್ಗಾಮಗ್ಗಾ ಬೆಳೆದದ್ದೇ ಕಾರಣ.

ಬಿ.ಸಂ. ಸುಬ್ಬಣ್ಣ, ಬೆಂಗಳೂರು

ಹೆತ್ತವರು ಸತ್ತು ಚಿತೆ ಏರುವ ಮೊದಲೇ ಮಕ್ಕಳು ಪಾಲಿಗಾಗಿ ಬಡಿದಾಡುವರಲ್ಲ?

ಅಂದು ಸೇರಿದ ಬಂಧು ಮತ್ತೆ ಸೇರುವುದು ಬಂದ್ ಎಂದು ತಿಳಿದಿರುತ್ತಲ್ಲ.

ಪಿ. ಜಯವಂತ ಪೈ, ಕುಂದಾಪುರ

ಸತ್ತವರನ್ನು ಸ್ವರ್ಗ/ನರಕಕ್ಕೆ ಕಳುಹಿಸುವವರು ದೇವರೋ, ಪುರೋಹಿತರೋ?

ಅವರೆಲ್ಲ ಶ್ಮಶಾನಕ್ಕೆ ಕಳುಹಿಸುತ್ತಾರಷ್ಟೆ. ಸಗ್ಗನಾಕಗಳಿಗೆ ಪಾಪಪುಣ್ಯಗಳೇ ಟಿಕೆಟ್ ಅಂತೆ.

ಜೀವಿ, ಗೊಂಡೇದಹಳ್ಳಿ

ಶಕ್ತಿದೇವತೆ ಎಂಬ ಬಿರುದು ದೇವಿಯರಿಗೆ ಮಾತ್ರವಿದೆ. ಗಂಡುದೇವರಿಗೆ ಏಕಿಲ್ಲ?



ಗಂಡುದೇವತೆಗಳೂ ದೇವಿಯರ ಆಣತಿಯಂತೆ ನಡೆದುಕೊಳ್ಳುವುದರಿಂದ.

ವಿ. ಹೇಮಂತಕುಮಾರ್, ಬೆಂಗಳೂರು

ದೇವಾಲಯಕ್ಕೂ, ಗ್ರಂಥಾಲಯಕ್ಕೂ ವ್ಯತ್ಯಾಸವೇನು?

ದೇವಾಲಯ ಭಕ್ತಿಗೆ, ಮುಕ್ತಿಗೆ ದಾರಿ; ಗ್ರಂಥಾಲಯ ಉಕ್ತಿಗೆ, ಯುಕ್ತಿಗೆ ಹೆದ್ದಾರಿ.

ರಾಜೇಂದ್ರ ಹೆಗಡೆ, ಹಾವೇರಿ

ಪ್ರತಿ ವಾರ ಪ್ರಶ್ನೆ ಕೇಳುವವರನ್ನು ಅಪ್ಪಿ ಮುದ್ದಾಡುವಿರೆಂಬ ಆಪಾದನೆ ನಿಮ್ಮ ಮೇಲಿದೆಯಲ್ಲ?

ಪ್ರಶ್ನೆ ಚೆನ್ನಾಗಿದ್ದರೆ ಪ್ರಶ್ನೆಯನ್ನು ಒಪ್ಪಿ ಎತ್ತಾಡುವುದಂತೂ ನಿಜ.

■ ರಾಮ್